Crl Mis– 9/2025

ಆರ್. ಡಬ್ಲ್ಯೂ.ನಂ. - 1

ದಿನಾಂಕ: 12.06.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು

**ಮುಂದುವರೆದ ಮುಖ್ಯ ವಿಚಾರಣೆಃ ಎದುರುದಾರರ ಪರ ಶ್ರೀ. ಎಸ್.ಕೆ ವಕೀಲರಿಂದ –**

ವೇತನ ಚೀಟಿಯನ್ನು ನಿಡಿ–12 ಎಂದು, ದಿನಾಂಕ 01.01.2025 ರಿಂದ 30.08.2025 ರವರೆಗಿನನ ಸ್ಟೇಟ್ ಮೆಂಟ್ ಅಕೌಂಟ್ಸ್ ಅನ್ನು ನಿಡಿ–13 ಎಂದು, ದಿನಾಂಕ 20.09.2024 ರ ಹೊನ್ನಾಳಿ ಉಪ ವಿಭಾಗಾಧಿಕಾರಿಗಳ ನ್ಯಾಯಾಲಯದ ಆದೇಶದ ನಕಲು ಅಫೀಲು ಮೆಮೊರೆಂಡಮ್, ದಾಖಲೆಗಳ ಪಟ್ಟಿ ಹಾಗೂ ಆದೇಶ ಪುಟದ ಧೃಡೀಕೃತ ನಕಲುಗಳನ್ನು ಒಟ್ಟಾಗಿ ನಿಡಿ– 14 ಎಂದು, ಮ್ಯೂಟೇಶನ್ ಅನ್ನು ನಿಡಿ– 15 ಎಂದು, ಪಹಣಿ ಪತ್ರಿಕೆಯನ್ನು ನಿಡಿ– 16 ಎಂದು, 2025 ಜನವರಿ ಹಾಗೂ ಏಪ್ರೀಲ್ 2026 ರ ವೇತನ ಚೀಟಿಗಳನ್ನು ನಿಡಿ– 17 ಮತ್ತು 18 ಎಂದು, ದಿನಾಂಕ 16.11.2024 ರಿಂದ ದಿನಾಂಕ 14.01.2025 ರ ವರೆಗಿನ ಸ್ಟೇಟ್ ಮೆಂಟ್ ಆಫ್ ಅಕೌಂಟ್ಸ್ ಅನ್ನು ನಿಡಿ– 19 ಎಂದು ಗುರುತಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀಮತಿ ಟಿ.ಹೆಚ್.ಕೆ ವಕೀಲರಿಂದ –**

**1.** 1 ನೇ ಅರ್ಜಿದಾರಳ ಬಂಗಾರವನ್ನು ಅಡ ಮಾಡಿ ಪಡೆದ ಸಾಲದ ಹಣವನ್ನು ಮಕ್ಕಳು ಶಾಲಾ ಫೀಜು, ಬಾಡಿಗೆ ಮನೆಯ ಮುಂಗಡ ಹಣ ನೀಡಲು ಉಪಯೋಗಿಸಿದ್ದೇನೆ. ಶಾಲೆಯ ಫೀಜಿಗೆ 1,30,000–1,40,000/– ಹಾಗೂ ಬಾಡಿಗೆ ಮನೆಯ ಮುಂಗಡವಾಗಿ 70 ಸಾವಿರ ರೂ.ಗಳನ್ನು ಕೊಟ್ಟಿದ್ದೇನೆ. ಅರ್ಜಿದಾರಳ ಹೆಸರಿನಲ್ಲಿ ಪಡೆದುಕೊಂಡಿದ್ದ 6,15,000/–ರೂ.ಗಳನ್ನು 1 ನೇ ಅರ್ಜಿದಾರಳಿಗೆ ಮಾಂಗಲ್ಯ ಸರ ಮಾಡಿಸಲು ಹಾಗೂ ಸ್ವಲ್ಪ ಹಣವನ್ನು ನನ್ನ ಸಾಲ ತೀರುವಳಿ ಮಾಡಲು ಉಪಯೋಗ ಮಾಡಿದ್ದೇನೆ. ನಾನು ವೈಯಕ್ತಿಕ ಸಾಲ ಎಂದು ಮಾಡಿಕೊಂಡಿದ್ದೆ. ಆ ಸಾಲವನ್ನು ಯಾವ ಉದ್ದೇಶಕ್ಕೆ ಪಡೆದು ಎಂದು ಈಗ ನನಗೆ ನೆನಪಿಲ್ಲ. ನಾನು ಪಡೆದುಕೊಂಡಿದ್ದ ವೈಯಕ್ತಿಕ ಸಾಲದ ಹಣವನ್ನು ಮೋಜು ಮಸ್ತಿ ಮಾಡಲು ಪಡೆದಿದ್ದೆ ಹೊರತು, ಅರ್ಜಿದಾರರಿಗೆ ಆ ಹಣವನ್ನು ಖರ್ಚು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ತಾಯಿ ಶಿಕ್ಷಕರಾಗಿದ್ದರಿಂದ ನಾನು ನನ್ನ ಚಿಕ್ಕ ವಯಸ್ಸಿನಿಂದಲೂ ಅತ್ಯುತ್ತಮ ಗುಣಮಟ್ಟದ ಜೀವನವನ್ನು ನಡೆಸುತ್ತಾ ಬಂದಿದ್ದೆ ಎಂದರೆ ಸರಿ. ಈಗಲೂ ಸಹ ಅತ್ಯುತ್ತಮ ಗುಣಮಟ್ಟದ ಐಶಾರಾಮಿ ಜೀವನ ನಡೆಸುತ್ತಿದ್ದೇನೆ ಎಂದರೆ ಸರಿಯಲ್ಲ. ಮುಂದುವರೆದು ಸಾಧಾರಣ ಜೀವನ ನಡೆಸುತ್ತಿದ್ದೇನೆ ಎನ್ನುತ್ತಾರೆ.

**2.** ಅರ್ಜಿದಾರರು ಸಾಗರದ ಬಾಡಿಗೆ ಮನೆಯಲ್ಲಿ ಇದ್ದಾರೆ ಎಂದರೆ ಸರಿ. ಆ ಮನೆಯನ್ನು ನಾನೇ ಮಾಡಿಸಿದ್ದೇನೆ ಎಂದರೆ ಸರಿ. ಅರ್ಜಿದಾರರು ಸಮಾಜದಲ್ಲಿ ನನ್ನ ಸ್ಥಾನ ಮಾನಕ್ಕೆ ಅನುಗುಣವಾಗಿ ಜೀವನ ನಡೆಸಬೇಕು ಎಂದರೆ ಸರಿ. ನನ್ನ ಸ್ಥಾನಮಾನಕ್ಕೆ ಅನುಗುಣವಾಗಿ 2 ಮತ್ತು 3 ನೇ ಅರ್ಜಿದಾರರು ವಿದ್ಯಾಭ್ಯಾಸ ಮಾಡಬೇಕು ಎಂದರೆ ಸರಿ. ಮುಂದುವರೆದು ಅವರು ಈಗ ಒಳ್ಳೆಯ ಶಾಲೆಯಲ್ಲಿಯೇ ಓದುತ್ತಿದ್ದಾರೆ ಎನ್ನುತ್ತಾರೆ. 2 ಮತ್ತು 3 ನೇ ಅರ್ಜಿದಾರರು ವಿದ್ಯಾಭ್ಯಾಸ ಮಾಡುವವರೆಗೆ ಅವರಿಗೆ ವಿದ್ಯಾಭ್ಯಾಸವನ್ನು ಕೊಡಿಸುವ ಜವಾಬ್ದಾರಿ ನನ್ನ ಮೇಲೆ ಇದೆ ಎಂದರೆ ಸರಿ. ಅರ್ಜಿದಾರರ ರಕ್ಷಣೆ ಮಾಡುವ ಜವಾಬ್ದಾರಿ ನನ್ನ ಮೇಲೆ ಇದೆ ಎಂದರೆ ಸರಿಯಲ್ಲ.

**3.** 2 ಮತ್ತು 3 ನೇ ಅರ್ಜಿದಾರರ ವಿದ್ಯಾಭ್ಯಾಸದ ಖರ್ಚುಗಳನ್ನು 2022 ರವರಿಗೆ ನಾನೇ ಭರಿಸಿದ್ದೇನೆ. 2 ಮತ್ತು 3 ನೇ ಅರ್ಜಿದಾರರು ಹೇಗೆ ವಿದ್ಯಾಭ್ಯಾಸ ಮಾಡುತ್ತಿದ್ದಾರೆ ಎಂದು ನಾನು ಕೇಳಿ ತಿಳಿದುಕೊಳ್ಳುವ ಪ್ರಯತ್ನ ಮಾಡಿಲ್ಲ. ಶಾಲೆಯಲ್ಲಿ ಪೋಷಕರ ಸಭೆಗೂ ಸಹ ನಾನು ಹೋಗಿಲ್ಲ. ನನ್ನ ತಕರಾರು ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರ ಹಾಗೂ ಆಸ್ತಿ ಮತ್ತು ಜವಾಬ್ದಾರಿ ಪಟ್ಟಿಯನ್ನು

ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಮಾಹಿತಿಯನ್ನು ಕೊಟ್ಟಿದ್ದೇನೆ. ನನ್ನ ಆಸ್ತಿ ಮತ್ತು ಜವಾಬ್ದಾರಿ ಪಟ್ಟಿಯ ಭಾಗ 'ಬಿ' ನ ಕ್ರಮ ಸಂಖ್ಯೆ-5 ರಲ್ಲಿನ ಮಾಹಿತಿಯನ್ನು ಸಹ ನಾನೇ ಕೊಟ್ಟಿದ್ದೇನೆ.

**4.** ಹೊನ್ನಾಳಿ ತಾಲ್ಲೂಕಿನ ಅರಬಗಟ್ಟೆ ಗ್ರಾಮದಲ್ಲಿ ಸರ್ವೇ ನಂಬರ್ 30/13 ರಲ್ಲಿ ನಮಗೆ ಆಸ್ತಿ ಇದೆ ಎಂದರೆ ಸರಿಯಲ್ಲ. ನನ್ನ ಹೆಸರಿನಲ್ಲಿ ಶಿವಮೊಗ್ಗದ ಕೋಟೆಗಂಗೂರಿನಲ್ಲಿದ್ದ 30x 50 ಅಡಿ ಅಳತೆಯ ನಿವೇಶನವನ್ನು ಸುಮಾರು 6-7 ವರ್ಷಗಳ ಹಿಂದೆ ಮಾರಾಟ ಮಾಡಿದ್ದೇನೆ. 2019 ಆಗಸ್ಟ್ ನಲ್ಲಿ ನಾನು, ನನ್ನ ತಾಯಿ ಮತ್ತು ನನ್ನ ಸಹೋದರಿ ಸೇರಿ ಕುಟುಂಬದ ಆಸ್ತಿಗಳನ್ನು ಹಿಸ್ಸೆ ಮಾಡಿಕೊಂಡಿದ್ದೇವೆ ಎಂದರೆ ಸರಿ. ಸದರಿ ಹಿಸ್ಸೆಯಲ್ಲಿ ಕೋಟೆಗಂಗೂರಿನ ನಿವೇಶನ ನನ್ನ ಹಿಸ್ಸೆಗೆ ಬಂದಿತ್ತು. ಅರ್ಜಿದಾರರು ಇವತ್ತಿಗೂ ಸಹ ನನ್ನ ಜೊತೆ ಬಂದು ಜೀವನ ಮಾಡಲು ಬಯಸುತ್ತಿದ್ದಾರೆ ಎಂದರೆ, ನಾನು ಕರೆದುಕೊಂಡು ಹೋಗುವುದಿಲ್ಲ ಎನ್ನುತ್ತಾರೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.